# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿ.ಜಿ.ಎಂ–9013/2017/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,
ದಿನಾಂಕ: 11/09/2019.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: (1) ಶ್ರೀ ಎಂ.ಎಂ ಗೂಳ್ಳಪ್ಪನವರ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೋಲಾರ (2) ಶ್ರೀ ಪಿ.ಎಸ್. ಜಾಡರ, ಗ್ರಾಮ ಲೆಕ್ಕಾಧಿಕಾರಿ, ತಹಶೀಲ್ದಾರ್ ಕಛೇರಿ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ, (3) ಶ್ರೀಮತಿ, ಗೀತಾ ಕೌಲಗಿ, ಉಪವಿಭಾಗಾಧಿಕಾರಿಗಳು, ಗದಗ ಜಿಲ್ಲೆ ಇವರುಗಳು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

ಶ್ರೀ ವಸಂತಗೌಡ ಭೀಮನಗೌಡ ಪಾಟೀಲ, ಲಿಂಗದಾಲ, ರಾಮದುರ್ಗ ತಾಲ್ಲೂಕು ಬೆಳಗಾವಿ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು ಸಲ್ಲಿಸಿ, (1) ಶ್ರೀ ತುಕರಾಮ ದಾಸರ, ತಹಶೀಲ್ದಾರ್, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ, (2) ಶ್ರೀ ಆರ್.ವಿ. ನಿಡೋನಿ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ, (3) ಶ್ರೀ ಇಮಾಮಸಾಬ್ ಹುಸೇನಪ್ಪ ಅಗಸರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಇದಗಾಲ ಗ್ರಾಮ ಪಂಚಾಯತ್, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ, ಇವರ ವಿರುದ್ಧ ದೂರು ಸಲ್ಲಿಸಿರುತ್ತಾರೆ. (4) ಶ್ರೀ ಎಂ.ಎಂ. ಗೂಳ್ಳಪ್ಪನವರ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೋಲಾರ, (5) ಶ್ರೀ ಪಿ.ಎಸ್. ಜಾಡರ, ಗ್ರಾಮ ಲೆಕ್ಕಾಧಿಕಾರಿ, ತಹಶೀಲ್ದಾರ್ ಕಛೇರಿ,

ಚಿಕ್ಕೋಡಿ ತಾಲ್ಲೂಕು, ಬೆಳಗಾವಿ, (6) ಶ್ರೀ ಕೆ.ಬಿ. ಸೂರ್ಯವಂಶಿ, ಕಂದಾಯ ನಿರೀಕ್ಷಕರು, ಮಾಳೆಗಾಂವ, ಬೀದರ್ ತಾಲ್ಲೂಕು ಮತ್ತು ಜಿಲ್ಲೆ, (7) ಶ್ರೀಮತಿ ಗೀತಾ ಕೌಲಗಿ, ಉಪವಿಭಾಗಾಧಿಕಾರಿಗಳು, ಗದಗ ಜಿಲ್ಲೆ, ಇವರುಗಳನ್ನು ಸೇರಿಸಿ ತನಿಖೆ ಕೈಗೊಳ್ಳಲಾಗಿರುತ್ತದೆ. (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ). ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಾರಾಂಶ:-

ಲಿಂಗದಾಳ ಗ್ರಾಮದ ಮಲಪ್ರಭಾ ನದಿಯ ದಡದಲ್ಲಿ ವಾಸಿಸುತ್ತಿದ್ದ ಪ್ರಕೃತಿ ವಿಕೋಪದಿಂದ ಬಾಧಿತರಾದ ಕುಟುಂಬಗಳನ್ನು ಸ್ಥಳಾಂತರಿಸಲು ಗ್ರಾಮ ಪಂಚಾಯತ್ ಇಡಗಲ್ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಸರ್ಕಾರವು ಅಧಿಕಾರ ನೀಡಿ ಬಾಧಿತ ಕುಟುಂಬಗಳಿಗೆ ಸ್ಥಳಾಂತರ ಪ್ರದೇಶದಲ್ಲಿ ನಿವೇಶನ ಮಂಜೂರು ಮಾಡಿಕೊಡುವ ಕುರಿತು ಆದೇಶ ಮಾಡಿರುತ್ತದೆ. ಎದುರುದಾರರು ಅನಧಿಕೃತವಾಗಿ ಬೇರೆ ಜನರಿಗೆ ಒಂದಕ್ಕಿಂತ ಹೆಚ್ಚು ಮನೆಗಳನ್ನು ಮಂಜೂರು ಮಾಡಿದ್ದು ಕೆಲವ್ರೊಂದು ಜನರಿಗೆ ನಿವೇಶನಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡಿದ್ದು ತನಿಖೆ ನಡೆಸಿ ನ್ಯಾಯ ಒದಗಿಸಿಕೊಡಬೇಕು ಎಂದು ಕೋರಿರುತ್ತಾರೆ.

3. 1ನೇ ಎದುರುದಾರರ ಆಕ್ಷೇಪಣೆ:-

ದಿನಾಂಕ: 26/03/2014 ರಿಂದ 31/01/2017 ರವರೆಗೆ ರಾಮದುರ್ಗ ತಹಶೀಲ್ದಾರರಾಗಿ ಕಾರ್ಯನಿರ್ವಹಿಸಿದ್ದು, ಸದರಿ ಅವಧಿಯಲ್ಲಿ ರಾಮದುರ್ಗ ತಾಲ್ಲೂಕಿನ ಇಡಗಲ್ಲ ಗ್ರಾಮ ಪಂಚಾಯತಿ ವ್ಯಾಪ್ತಿಯ ಲಿಂಗದಾಳ ಗ್ರಾಮದಲ್ಲಿ ತಹಶೀಲ್ದಾರ್ ಕಾರ್ಯಾಲಯದಿಂದ (ಕಂದಾಯ ಇಲಾಖೆಯಿಂದ) ಯಾವುದೇ ರೀತಿಯ ನಿವೇಶನ ಹಂಚಿಕೆ ಮಾಡಿರುವುದಿಲ್ಲ. ಸದರಿ ನಿವೇಶನಗಳ ಹಂಚಿಕೆಯು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ರಾಮದುರ್ಗ ಇವರ ವ್ಯಾಪ್ತಿಗೆ ಬರುತ್ತದೆ ಎಂದು ನಮೂದಿಸಿರುತ್ತಾರೆ.

N. Anand

4. 2ನೇ ಎದುರುದಾರರ ಆಕ್ಷೇಪಣೆಗಳು:-

[redacted] ಲಿಂಗದಾಳ ಗ್ರಾಮವು ಪ್ರಕೃತಿ ವಿಕೋಪದಲ್ಲಿ ಬರುವುದರಿಂದ ಸದರಿ ಗ್ರಾಮಕ್ಕೆ ಸಂಬಂಧಿಸಿದಂತೆ ಶಿಫ್ಟಿಂಗ್ ವ್ಯವಸ್ಥೆಯನ್ನು ಹಾಗೂ ನಿವೇಶನ ಮಂಜೂರಾತಿಯನ್ನು ಕಂದಾಯ ಇಲಾಖೆಯವರು ಮಾಡಿರುತ್ತಾರೆ. ಕಾರ್ಯನಿರ್ವಾಹಕ ಅಧಿಕಾರಿಗಳ ಮೇಲು ರುಜುವನ್ನು ಸಂತ್ರಸ್ಥರ ಯಾದಿಗೆ ಮಾತ್ರ ತೆಗೆದುಕೊಂಡಿರುತ್ತಾರೆ. ನಿವೇಶನ ಮಂಜೂರಾತಿ ಪ್ರಾಧಿಕಾರ ಕಂದಾಯ ಇಲಾಖೆ ಇದ್ದು ಹಂಚಿಕೆ ಅನುಸಾರ ಆಸ್ತಿ ವಹಿಯಲ್ಲಿ ದಾಖಲೆಯನ್ನು ಮಾತ್ರ ಸಂಬಂಧಪಟ್ಟ ಗ್ರಾಮ ಪಂಚಾಯತ್ (ಇಡಗಲ್) ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತ್ ಸಭೆಯ ಅನುಮೋದನೆಯೊಂದಿಗೆ ದಾಖಲಿಸಿಕೊಳ್ಳುವ ಪ್ರಾಧಿಕಾರ ಆಗಿರುತ್ತಾರೆ ಎಂದು ನಮೂದಿಸಿರುತ್ತಾರೆ.

5. 3ನೇ ಎದುರುದಾರರ ಆಕ್ಷೇಪಣೆಗಳು:-

ಲಿಂಗದಾಳ ಗ್ರಾಮದ ನೆರೆಪೀಡಿದ ಭಾದಿತ ಕುಟುಂಬಗಳಿಗೆ ಸರ್ಕಾರದ ಆಸರೆ ಯೋಜನೆಯಡಿ ನಿರ್ಮಿಸಿರುವ ಮನೆಗಳನ್ನು ಈ ಮೊದಲು ಇಡಗಲ್ಲ ಗ್ರಾಮ ಪಂಚಾಯತ್‌ನಲ್ಲಿ ಕಾರ್ಯನಿರ್ವಹಿಸಿದ ಅಧಿಕಾರಿಗಳು ಸನ್ 2010-11 ಸಾಲಿನಲ್ಲಿ ಮನೆಗಳನ್ನು ಹಂಚಿಕೆ ಮಾಡಿರುತ್ತಾರೆ. ನಾನು ಇಡಗಲ್ಲ ಗ್ರಾಮ ಪಂಚಾಯತ್‌ಗೆ ನವೆಂಬರ್-2014ರಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ ಎಂದು ನಮೂದಿಸಿರುತ್ತಾರೆ.

6. 4ನೇ ಎದುರುದಾರರ ಆಕ್ಷೇಪಣೆಗಳು:-

"ನೆರೆ ಪೀಡಿತ ಬಾಧಿತ ಕುಟುಂಬಗಳ ಸಮೀಕ್ಷೆಯನ್ನು ಆಗಿನ ಕಂದಾಯ ಇಲಾಖೆಯ ಅಧಿಕಾರಿಗಳು, ಗ್ರಾಮ ಪಂಚಾಯತ್ ನೆರವಿನೊಂದಿಗೆ ಮಾಡಿರುತ್ತಾರೆ. ಸಮೀಕ್ಷೆ ಮಾಡಿದ ಯಾದಿಗೆ ಮಂಜೂರ ಮಾಡುವ ಅಧಿಕಾರ ಕಂದಾಯ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಸದರಿ ಸಮೀಕ್ಷೆ ಮಾಡಿದ ಯಾದಿಯಲ್ಲಿ ದೂರುದಾರರಾದ ಶ್ರೀ ವಸಂತಗೌಡ ಭೀಮನಗೌಡ ಪಾಟೀಲ ಇವರ ಹೆಸರು ಇರುವುದಿಲ್ಲ ಹಾಗೂ ವಾಸಿಸುವ ಹಳೆ ಮನೆಗಳನ್ನು ಸರ್ಕಾರಕ್ಕೆ ಸ್ಥಳಾಂತರಗೊಳ್ಳಲು ಒಪ್ಪಿಗೆ ನೀಡಿದ ಸಂತ್ರಸ್ಥರ ಯಾದಿಯಲ್ಲಿಯೂ ದೂರುದಾರರ ಹೆಸರು ಇರುವುದಿಲ್ಲ. ಕಂದಾಯ ಇಲಾಖೆಯಿಂದ ಮಂಜೂರಾದ ನೆರೆ ಪೀಡಿತ ಬಾಧಿತ ಕುಟುಂಬಗಳ

ಯಾದಿಯ ಪ್ರಕಾರ ಆಸರೆ ಯೋಜನೆ ಅಡಿಯಲ್ಲಿ ನಿರ್ಮಿಸಿದ ಮನೆಗಳನ್ನು ಹಸ್ತಾಂತರ ಮಾಡಲಾಗಿದೆಯೇ ಹೊರತು ಮಂಜೂರು ಮಾಡುವ ಅಧಿಕಾರ ನನ್ನ ವ್ಯಾಪ್ತಿಗೆ ಬರುವುದಿಲ್ಲ" ಎಂದು ನಮೂದಿಸಿರುತ್ತಾರೆ.

7. 5ನೇ ಎದುರುದಾರರ ಆಕ್ಷೇಪಣೆಗಳು:–

ಲಿಂಗದಾಳ ಗ್ರಾಮದ ನೆರೆಪೀಡಿತ ಭಾದಿತ ಕುಟುಂಬಗಳಿಗೆ ಸರ್ಕಾರದ ಆಶ್ರಯ ಯೋಜನೆಯಡಿ ನಿರ್ಮಿಸಿರುವ ಮನೆಗಳ ಸಮೀಕ್ಷೆಯನ್ನು 2005ರಲ್ಲಿ ಮಾಡಿದ್ದು ನಾನು ಗ್ರಾಮ ಲೆಕ್ಕಾಧಿಕಾರಿ ಎಂದು ದಿನಾಂಕ: 01/01/2010 ರಂದು ಲಿಂಗದಾಳ ಗ್ರಾಮದ ಚಾರ್ಜ್ ತೆಗೆದುಕೊಂಡಿರುತ್ತೇನೆ. ಹಳೆಯ ಮನೆಗಳನ್ನು ಸರ್ಕಾರಕ್ಕೆ ಬರೆದುಕೊಟ್ಟು ಸ್ಥಳಾಂತರಗೊಳ್ಳಲು ಒಪ್ಪಿಗೆ ನೀಡಿದ ಸಂತ್ರಸ್ಥರ ಯಾದಿಯಲ್ಲಿ ಈ ಹಿಂದೆ 2005ರಲ್ಲಿ ಸಮೀಕ್ಷೆ ಮಾಡಿದ ಯಾದಿಯಲ್ಲಿ ಸುಮಾರು 197 ಫಲಾನುಭವಿಗಳು ಇರುತ್ತಾರೆ ಎಂದು ನಮೂದಿಸಿರುತ್ತಾರೆ.

8. 6ನೇ ಎದುರುದಾರರ ಆಕ್ಷೇಪಣೆಗಳು:

ಸರ್ಕಾರದ ಆಶ್ರಯ ಯೋಜನೆ ಅಡಿಯಲ್ಲಿ ನಿರ್ಮಿಸಿರುವ ಮನೆಗಳ ಸಮೀಕ್ಷೆಯು 2005–06ರಲ್ಲಿ ಮಾಡಿದ್ದು ಆ ವೇಳೆಯಲ್ಲಿ ನಾನು ಅಥಣಿ ತಾಲ್ಲೂಕಿನ ಕೂಸನಾಳ ಗ್ರಾಮ ಲೆಕ್ಕಾಧಿಕಾರಿಯಾಗಿ ನಿರ್ವಹಿಸುತ್ತೇನೆ ಎಂದು ನಮೂದಿಸಿರುತ್ತಾರೆ.

9. 7ನೇ ಎದುರುದಾರರ ಆಕ್ಷೇಪಣೆಗಳು:

ಸನ್. 2005ರಲ್ಲಿ ಲಿಂಗದಾಳ ಗ್ರಾಮದ ನೆರೆ ಹಾವಳಿಯಿಂದ ತೊಂದರೆಗೊಳಪಡುವ ಕುಟುಂಬಗಳ ಬಗ್ಗೆ ಸಮೀಕ್ಷೆ ಮಾಡಲಾಗಿದ್ದು, ದೂರುದಾರರ ಹೆಸರು ಸದರಿ ಸಮೀಕ್ಷೆ ಯಾದಿಯಲ್ಲಿ ಇಲ್ಲದಿರುವುದು ಕಂಡುಬರುತ್ತದೆ. ಹಕ್ಕು ಪತ್ರ ವಿತರಣಾ ಯಾದಿಯನ್ನು ಪರಿಶೀಲಿಸಲಾಗಿ, ಯಾವುದೇ ಫಲಾನುಭವಿಗಳಿಗೆ ಎರಡೆರಡು ಸಲ ಹಕ್ಕು ಪತ್ರ ವಿತರಣೆಯಾಗಿರುವುದು ಕಂಡುಬರುವುದಿಲ್ಲ ಎಂದು ನಮೂದಿಸಿರುತ್ತಾರೆ.

10. ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿರುತ್ತದೆ. ಲಿಂಗದಾಳ ಗ್ರಾಮವು ಮಲಪ್ರಭಾ ನದಿಯ ದಡದಲ್ಲಿದ್ದು ಮಳೆಗಾಲದಲ್ಲಿ ಪ್ರವಾಹ ಬಂದಾಗ ಉಂಟಾಗುವ

ತೊಂದರೆ ತಪ್ಪಿಸಲು ನೆರೆ ಪೀಡಿತ ಬಾಧಿತ ಕುಟುಂಬಗಳ ಸಮೀಕ್ಷೆಯನ್ನು ಕಂದಾಯ ಇಲಾಖೆಯ ಅಧಿಕಾರಿಗಳು ಇಡಗಲ್ ಗ್ರಾಮಪಂಚಾಯತ್ ನೆರವಿನೊಂದಿಗೆ 2005ನೇ ಸಾಲಿನಲ್ಲಿ ಮಾಡಿರುತ್ತಾರೆ. ಸಮೀಕ್ಷೆ ಮಾಡಿ ಬಾಧಿತ ಕುಟುಂಬಗಳ ಪಟ್ಟಿ ತಯಾರಿಸಿರುತ್ತಾರೆ. ಸಮೀಕ್ಷೆ ಮಾಡಿದ ಯಾದಿಗೆ ಮಂಜೂರು ಮಾಡುವ ಅಧಿಕಾರ ಕಂದಾಯ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವುದು ಕಂಡುಬಂದಿರುತ್ತದೆ. ಕಂದಾಯ ಇಲಾಖೆಯ ಮಂಜೂರಾತಿ ಆದೇಶದಂತೆ ಆಸರೆ ಯೋಜನೆ ಅಡಿಯಲ್ಲಿ ಮನೆಗಳನ್ನು ಹಸ್ತಾಂತರ ಮಾಡಲಾಗಿರುತ್ತದೆ. ಕಂದಾಯ ಇಲಾಖೆಯ ಸಮೀಕ್ಷೆ ಮಾಡಿದ ವರದಿ ಪ್ರತಿ, ನೆರೆಹಾವಳಿಯಿಂದ ತೊಂದರೆಗೊಳಪಡುವ ಕುಟುಂಬಗಳ ಯಾದಿಯ ಪ್ರತಿ, ಬಾಧಿತ ಕುಟುಂಬಗಳಿಗೆ ಆಸರೆ ಯೋಜನೆ ಅಡಿ ನಿರ್ಮಿಸುತ್ತಿರುವ ಮನೆಗಳಿಗೆ ಬಾಧಿತರು ವಾಸಿಸುವ ಹಳೆ ಮನೆಗಳನ್ನು ಸರ್ಕಾರಕ್ಕೆ ಬಿಟ್ಟು ಕೊಟ್ಟು ಸ್ಥಳಾಂತರಗೊಳ್ಳಲು ಒಪ್ಪಿಗೆ ನೀಡಿದ ಸಂತ್ರಸ್ಥರ ಪಟ್ಟಿಯ ಪ್ರತಿಯನ್ನು ತನಿಖೆಯಲ್ಲಿ ಸಂಗ್ರಹಿಸಲಾಗಿರುತ್ತದೆ. ಆಸರೆ ಯೋಜನೆ ಅಡಿಯಲ್ಲಿ ನಿರ್ಮಿಸಿದ ಮನೆಗಳನ್ನು ವಿತರಿಸಿದ ಫಲಾನುಭವಿಗಳ ವಿವರ, ಹಕ್ಕು ಪತ್ರ ವಿವರ, ಹಸ್ತಾಂತರ ಮಾಡಿದ ವಿವರಗಳಿರುವ ಪಟ್ಟಿಗೆ 3ನೇ ಎದುರುದಾರರು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಎಂದು ಸಹಿ ಮಾಡಿರುತ್ತಾರೆ.

11. ನಿವೇಶನ ಮಂಜೂರಾತಿ ಪ್ರಾಧಿಕಾರ ಕಂದಾಯ ಇಲಾಖೆ ಇದ್ದು ಹಂಚಿಕೆ ಅನುಸಾರ ಆಸ್ತಿ ವಹಿಯನ್ನು ಇಡಗಲ್ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ದಾಖಲಿಸುವ ಪ್ರಾಧಿಕಾರ ಆಗಿರುತ್ತಾರೆ. ಪಂಚಾಯ್ತಿಯಿಂದ 2010–11ನೇ ಸಾಲಿನಲ್ಲಿ ಮನೆಗಳನ್ನು ಹಂಚಿಕೆ ಮಾಡಿರುವುದು ಕಂಡುಬಂದಿದೆ.

12. ನೆರೆ ಪೀಡಿತ ಕುಟುಂಬಗಳ ಯಾದಿಯ ಪ್ರಕಾರ ಆಸರೆ ಯೋಜನೆ ಅಡಿಯಲ್ಲಿ ನಿರ್ಮಿಸಿದ ಮನೆಗಳನ್ನು 4ನೇ ಎದುರುದಾರರು ಹಸ್ತಾಂತರ ಮಾಡಿದ್ದಾಗಿ ತಮ್ಮ ಆಕ್ಷೇಪಣೆಯಲ್ಲಿ ನಮೂದಿಸಿರುತ್ತಾರೆ.

13. ಬಾಧಿತ ಕುಟುಂಬದವರು ವಾಸಿಸುತ್ತಿದ್ದ ಹಳೆ ಮನೆಗಳನ್ನು ಸರ್ಕಾರಕ್ಕೆ ಬಿಟ್ಟುಕೊಟ್ಟು ಆಸರೆ ಯೋಜನೆ ಅಡಿ ನಿರ್ಮಿಸಿದ ಮನೆಗಳಿಗೆ ಸ್ಥಳಾಂತರಗೊಳ್ಳಲು ಒಪ್ಪಿಗೆ ನೀಡಿದ ಸಂತ್ರಸ್ಥರ ಯಾದಿಯಲ್ಲಿ ಒಟ್ಟು 95 ಜನ ಸಂತ್ರಸ್ಥರ ಹೆಸರು ಪಟ್ಟಿಯಲ್ಲಿ ನಮೂದಿರುತ್ತದೆ.

14. ಸದರಿ ಯಾದಿಯನ್ನು ಪರಿಶೀಲಿಸಲಾಗಿ ಮನೆಯ ಮುಖ್ಯಸ್ಥರಾದ 5 ಜನರ ಹೆಸರು ಎರಡು ಬಾರಿ ನಮೂದಿಸಲಾಗಿರುತ್ತದೆ.

(1) ಪಕೀರಪ್ಪ ಹ ಗಿರೆನ್ನವರ ಇವರ ವಿವರಗಳು ಕ್ರ.ಸಂ. 1 ರಲ್ಲಿ ಹಾಗೂ ಕ್ರ.ಸಂ. 71 ರಲ್ಲಿ ಇರುವುದು ಕಂಡುಬಂದಿದ್ದು ಎರಡು ಹಳೆ ಮನೆಗಳನ್ನು ಸರ್ಕಾರಕ್ಕೆ ಬಿಟ್ಟುಕೊಟ್ಟು ಆಸರೆ ಮನೆಗಳಿಗೆ ಸ್ಥಳಾಂತರಗೊಳ್ಳಲು ಒಪ್ಪಿಗೆ ನೀಡಿರುವುದು ಕಂಡುಬಂದಿರುತ್ತದೆ.

(2) ರಾಮಚಂದ್ರ ಶಿವನಪ್ಪ ಬಡಿಗೆರ ಇವರ ವಿವರಗಳು ಕ್ರ.ಸಂ. 13 ಹಾಗೂ ಕ್ರ.ಸಂ. 18 ರಲ್ಲಿ ಇರುವುದು ಕಂಡುಬಂದಿದ್ದು ಎರಡು ಹಳೆ ಮನೆಗಳನ್ನು ಸರ್ಕಾರಕ್ಕೆ ಬಿಟ್ಟುಕೊಟ್ಟು ಆಸರೆ ಮನೆಗಳಿಗೆ ಸ್ಥಳಾಂತರಗೊಳ್ಳಲು ಒಪ್ಪಿಗೆ ನೀಡಿರುವುದು ಕಂಡುಬಂದಿರುತ್ತದೆ.

(3) ಪಡಿಯಪ್ಪಗೌಡ ಮಲ್ಲನಗೌಡ ಪಾಟೀಲ ಇವರ ವಿವರಗಳು ಕ್ರ.ಸಂ. 39 ಹಾಗೂ ಕ್ರ.ಸಂ. 45 ರಲ್ಲಿ ಇರುವುದು ಕಂಡುಬಂದಿದ್ದು ಎರಡು ಹಳೆ ಮನೆಗಳನ್ನು ಸರ್ಕಾರಕ್ಕೆ ಬಿಟ್ಟುಕೊಟ್ಟು ಆಸರೆ ಮನೆಗಳಿಗೆ ಸ್ಥಳಾಂತರಗೊಳ್ಳಲು ಒಪ್ಪಿಗೆ ನೀಡಿರುವುದು ಕಂಡುಬಂದಿರುತ್ತದೆ.

(4) ನಿಂಗನಗೌಡ ಕೃಷ್ಣಗೌಡ ಪಾಟೀಲ ಇವರ ವಿವರಗಳು ಕ್ರ.ಸಂ. 64 ರಲ್ಲಿ ಹಾಗೂ ಕ್ರ.ಸಂ. 89 ರಲ್ಲಿ ಇರುವುದು ಕಂಡುಬಂದಿದ್ದು ಎರಡು ಹಳೆ ಮನೆಗಳನ್ನು ಸರ್ಕಾರಕ್ಕೆ ಬಿಟ್ಟುಕೊಟ್ಟು ಆಸರೆ ಮನೆಗಳಿಗೆ ಸ್ಥಳಾಂತರಗೊಳ್ಳಲು ಒಪ್ಪಿಗೆ ನೀಡಿರುವುದು ಕಂಡುಬಂದಿರುತ್ತದೆ.

(5) ಗೂಳಪ್ಪ ಹನುಮಪ್ಪ ಗಿರೆನ್ನವರ ಇವರ ವಿವರಗಳು ಕ್ರ.ಸಂ. 69 ರಲ್ಲಿ ಹಾಗೂ ಕ್ರ.ಸಂ. 91 ರಲ್ಲಿ ಇರುವುದು ಕಂಡುಬಂದಿದ್ದು ಎರಡು ಹಳೆ ಮನೆಗಳನ್ನು ಸರ್ಕಾರಕ್ಕೆ ಬಿಟ್ಟುಕೊಟ್ಟು ಆಸರೆ ಮನೆಗಳಿಗೆ ಸ್ಥಳಾಂತರಗೊಳ್ಳಲು ಒಪ್ಪಿಗೆ ನೀಡಿರುವುದು ಕಂಡುಬಂದಿರುತ್ತದೆ.

ಸದರಿ ಪಟ್ಟಿಗೆ 4 ರಿಂದ 7ನೇ ಎದುರುದಾರರು ತಮ್ಮ ಸಹಿಗಳನ್ನು ಹಾಕಿರುತ್ತಾರೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಹೆಚ್.ಟಿ. ಕಟ್ಟಿ ರವರು ಮೃತಪಟ್ಟಿರುವುದು ತನಿಖೆಯಲ್ಲಿ ಕಂಡುಬಂದಿರುತ್ತದೆ.

15. ಪಿರ್ಯಾದುದಾರರು ತಮ್ಮ ದೂರಿನಲ್ಲಿ ಒಬ್ಬರಿಗೆ ಒಂದಕ್ಕಿಂತ ಹೆಚ್ಚು ಮನೆಗಳನ್ನು ಮಂಜೂರು ಮಾಡಿ ಕರ್ತವ್ಯಲೋಪ ಎಸಗಿರುವ ಬಗ್ಗೆ ಆರೋಪಿಸಿದ್ದು ಮೇಲೆ ನಮೂದಿಸಿರುವ 5 ಜನರ ಎರಡು ಹಳೆ ಮನೆಗಳನ್ನು ಸರ್ಕಾರಕ್ಕೆ ಬಿಟ್ಟುಕೊಟ್ಟಿದ್ದು ಆಸರೆ ಮನೆಗಳಿಗೆ ಸ್ಥಳಾಂತರಗೊಳ್ಳಲು ಒಪ್ಪಿಗೆ ಸೂಚಿಸಿದ್ದು ಸದರಿ ಪಟ್ಟಿಯಲ್ಲಿ 5 ಜನರ ಹೆಸರುಗಳನ್ನು ಎರಡು ಬಾರಿ ನಮೂದಿಸಿ

N. Anand

ಆಸರೆ ಮನೆಗಳನ್ನು ನೀಡಲು 4 ರಿಂದ 7ನೇ ಎದುರುದಾರರು ಕ್ರಮ ಜರುಗಿಸಿ ಅಕ್ರಮ ಎಸಗಿರುವುದು ಕಂಡುಬಂದಿರುತ್ತದೆ. ಸದರಿ ಯಾದಿಯನ್ನು ತಯಾರಿಸುವಲ್ಲಿ ದಾಖಲೆಗೆ ಸಹಿ ಮಾಡಿದ 4 ರಿಂದ 7ನೇ ಎದುರುದಾರರು ಕರ್ತವ್ಯ ನಿಷ್ಠೆ ಪಾಲಿಸದೆ ಲೋಪ ಎಸಗಿರುವುದು ಕಂಡುಬಂದಿರುತ್ತದೆ. 6ನೇ ಎದುರುದಾರರು ದಿನಾಂಕ: 31/12/2011 ರಂದು ನಿವೃತ್ತಿ ಹೊಂದಿರುವುದು ತನಿಖೆಯಲ್ಲಿ ಕಂಡುಬಂದಿರುತ್ತದೆ.

16. ಬಾಧಿತ ಕುಟುಂಬದವರು ವಾಸಿಸುತ್ತಿದ್ದ ಮನೆಯ ಯಜಮಾನರು ಹಳೆ ಮನೆಗಳನ್ನು ಸರ್ಕಾರಕ್ಕೆ ಬಿಟ್ಟು ಕೊಟ್ಟಿದ್ದಾರೆಂದು ಆಸರೆ ಮನೆಗಳಿಗೆ ಸ್ಥಳಾಂತರಗೊಳ್ಳಲು ಒಪ್ಪಿಗೆ ನೀಡಿದ್ದಾರೆಂದು 5 ಜನರ ಹೆಸರನ್ನು ಸಂತ್ರಸ್ಥರ ಯಾದಿಯಲ್ಲಿ ಎರಡು ಬಾರಿ ನಮೂದಿಸಿ 4, 5, 7ನೇ ಎದುರುದಾರರು ಕರ್ತವ್ಯ ಲೋಪ ಎಸಗಿರುತ್ತಾರೆ.

**17.** ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1) (i) ರಿಂದ (iii) ರನ್ವಯ 4, 5, ಮತ್ತು 7ನೇ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, **4ನೇ ಎದುರುದಾರರಾದ**–ಶ್ರೀ ಎಂ.ಎಂ. ಗೂಳಪ್ಪನವರ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೋಲಾರ, **5ನೇ ಎದುರುದಾರರಾದ**– ಶ್ರೀ ಪಿ.ಎಸ್. ಜಾಡರ, ಗ್ರಾಮ ಲೆಕ್ಕಾಧಿಕಾರಿ, ತಹಶೀಲ್ದಾರ್ ಕಛೇರಿ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ, **7ನೇ ಎದುರುದಾರರಾದ**– ಶ್ರೀಮತಿ ಗೀತಾ ಕೌಲಗಿ, ಉಪವಿಭಾಗಾಧಿಕಾರಿಗಳು, ಗದಗ ಜಿಲ್ಲೆ ಇವರುಗಳ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಹಾಗೂ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

18. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anandu 11/9

[ನ್ಯಾಯಮೂರ್ತಿ ಎನ್. ಆನಂದ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.